ಒ ಎಸ್ 94/2020 ಪಿ.ಡಬ್ಲ್ಯೂ: 1

ಇಂದು ದಿ: 16.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: 6 ರಿಂದ 8ನೇ ಪ್ರತಿವಾದಿ ಪರ ಶ್ರೀ ಸಿ ಎಲ್ ಬಿ ವಕೀಲರಿಂದ:

ಸರ್ವೆ ನಂ. 213 ರಲ್ಲಿ 2 ಎಕರೆ ಜಮೀನು ಭೂ ಸ್ವಾಧೀನವಾಗಿದೆ ಎಂದರೆ ಸರಿಯಲ್ಲ. 2 ಎಕರೆ ಪ್ರದೇಶದಲ್ಲಿ 83 ನಿವೇಶನ ಮಾಡಿದ್ದಾರೆ ಎಂದರೆ ಸುಳ್ಳು. ಸಂಬಂಧಪಟ್ಟ ಇಲಾಖೆಯವರು ಒಂದು ನಕ್ಷೆ ತಯಾರಿಸಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ. 213ರ ಭೂಸ್ವಾಧೀನವಾದ 2 ಎಕರೆ ಜಮೀನಿನ ಪೂರ್ವಕ್ಕೆ ಸರ್ವೆ ನಂ. 210 ರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ತಿರುಗಾಡುವ ದಾರಿ ಇದೆ ಆದರೆ ಆ ನಂತರ ಸರ್ವೆ ನಂ. 213ರ ಉಳಿಕೆ ಜಮೀನು ಇರುವುದಿಲ್ಲ. ತಿರುಗಾಡುವ ದಾರಿಯು ಭೂಸ್ವಾಧೀನವಾದ ಸರ್ವೆ ನಂ 212ರ ರಲ್ಲಿ ಇದೆ ಎಂದರೆ ಸರಿಯಲ್ಲ. ಭೂಸ್ವಾಧೀನವಾದ ಜಮೀನಿನ ಉತ್ತರದ ಕಡೆಗೆ ಸರ್ವೆ ನಂ. 213ರ ಉಳಿಕೆ ಜಮೀನು ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸರ್ವೆ ನಂ. 211 ಮತ್ತು 213ರ ಉಳಿಕೆ ಜಮೀನು ಇದೆ ಎಂದರೆ ಸುಳ್ಳು. ಭೂಸ್ವಾಧಿನವಾದ ಜಮೀನಿಗೆ ಉಪ ವಿಭಾಗಾಧಿಕಾರಿಗಳು ಸುತ್ತೋಲೆ ಮಾಡಿ ಪರಿಹಾರದ ಹಣ ಜಮೆಯಾದ ಬಗ್ಗೆ ದಾಖಲೆಯನ್ನು ಕೊಟ್ಟಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ. 213ರಲ್ಲಿ ಒಟ್ಟು 36 ಎಕರೆ ಜಮೀನು ಇದೆ.

ಸರ್ವೆ ನಂ. 213ರ ಭೂಸ್ವಾಧೀನವಾದ 2 ಎಕರೆ ಜಮೀನಿನ ಬಗ್ಗೆ ನನ್ನ ತಾಯಿ ಪುಟ್ಟಬಸಮ್ಮ ಮತ್ತು ನನ್ನ ಸಹೋದರ ಸಹೋದರಿಯರು ಇದೇ ನ್ಯಾಯಾಲಯದಲ್ಲಿ ಒ ಎಸ್ 102/2003 ಅನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಮತ್ತು ಘೋಷಣಾತ್ಮಕ ಡಿಕ್ರಿ ಕೇಳಿ ಹಾಕಿದ್ದಾರೆ ಎಂದರೆ ನನನ ಚಿಕ್ಕಪ್ಪ ಹಾಕಿದ್ದಾರೆ ಎನ್ನುತ್ತಾರೆ. ಆ ದಾವೆಯಲ್ಲಿ ನಾನು ಪ್ರಾ ಸಾ 1 ಆಗಿ ಸಾಕ್ಷಿ ನುಡಿದಿದ್ದೇನೆ. ಆ ದಾವೆಯು ದಿ.02.02.2008ರಂದು ವಜಾ ಆಗಿದೆ ಎಂದರೆ ನನ್ನ ಚಿಕ್ಕಮ್ಮ ಮೃತರಾದರು ಆನಂತರ ವಜಾ ಆಗಿದೆ ಎನ್ನುತ್ತಾರೆ. ನನ್ನ ಚಿಕ್ಕಮ್ಮ ಮಹದೇವಮ್ಮ. ನನ್ನ ಚಿಕ್ಕಮ್ಮ ಮೃತರಾದ ಕಾರಣ ದಾವೆ ವಜಾ ಆಗಿಲ್ಲ, ಆದರೆ ಸಂಪೂರ್ಣ ವಿಚಾರಣೆಯಾದ ನಂತರ ವಜಾ ಆಗಿದೆ ಎಂದರೆ ಸರಿಯಲ್ಲ. ಆ ದಾವೆಯ ಜಮೀನಿನ ಪೂರ್ವಕ್ಕೆ 210ರ ಜಮೀನು ಎಂದು ಚೆಕ್ಕುಬಂಧಿ ತೋರಿಸಿದ್ದೇವೆ ಎಂದರೆ ಸರಿ. ಪಶ್ಚಿಮಕ್ಕೆ 211ರ ಜಮೀನು ಎಂದು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಉತ್ತರಕ್ಕೆ ಸರ್ವೆ ನಂ. 213 ರ ಉಳಿದ ಪ್ರದೇಶ ಎಂದು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸರ್ವೆ ನಂ. 211ರ ಜಮೀನು ಎಂದು ಚೆಕ್ಕುಬಂಧಿ ತೋರಿಸಿದ್ದೇವೆ ಎಂದರೆ ಸುಳ್ಳು. ನಂತರ 213ರ ಭೂಸ್ವಾಧೀನವಾದ 2 ಎಕರೆ ಜಮೀನಿಗೆ ಒ ಎಸ್ 351/2010 ಎಂದು ದಾಖಲಿಸಿದ್ದೇವೆ ನನ್ನ ಚಿಕ್ಕಮ್ಮ ಮಹದೇವಮ್ಮ ದಾಖಲಿಸಿರುತ್ತಾರೆ ಎನ್ನುತ್ತಾರೆ. ಆ ದಾವೆಯನ್ನು ನಾನು, ಪುಟ್ಟರಂಗಯ್ಯ ಮತ್ತು ಪುಟ್ಟಬಸಮ್ಮ ಸೇರಿ ಹಾಕಿದ್ದೆವು ಎಂದರೆ ಸರಿ. ಆ ದಾವೆಯು ದಿ. 02.12.2014ರಲ್ಲಿ ವಜಾ ಆಯಿತು ಎಂದರೆ ನನ್ನ ಚಿಕ್ಕಮ್ಮ ಮೃತರಾದ ನಂತರ ಅವರು ದಾವೆಗೆ

ಬಂದಿಲ್ಲದ ಕಾರಣ ವಜಾ ಆಯಿತು ಎನ್ನುತ್ತಾರೆ. 2 ಎಕರೆ ಜಮೀನಿಗೆ ತೋರಿಸಿರುವ ಚೆಕ್ಕುಬಂಧಿಯನ್ನು ಈ ದಾವಾ ಆಸ್ತಿಯ ಚೆಕ್ಕುಬಂಧಿಯಾಗಿ ತೋರಿಸಿದ್ದೇವೆ ಎಂದರೆ ಸುಳ್ಳು. ಹಿಂದೆ ನಡೆದ ದಾವೆಗಳ ವಿಚಾರವನ್ನು ಈ ದಾವೆಯಲ್ಲಿ ನಾನು ಹೇಳಿ ಬರೆಸಿಲ್ಲ ಎಂದರೆ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ದಾವಾ ಆಸ್ತಿಗಳು ಏನು ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣೆ  ಪ್ರಮಾಣ ಪತ್ರದ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಹಿಂದಿನ ಎರಡು ದಾವೆಗಳ ಬಗ್ಗೆ ತಿಳಿಸಿದ್ದೇನೊ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಹಿಂದಿನ ದಾವೆಗಳು ನನಗೆ ಗೊತ್ತಿದ್ದರೂ ಸಹ ಆ ಮಾಹಿತಿಯನ್ನು ಮರೆಮಾಚಿ ಸುಳ್ಳು ಪ್ರಮಾಣ ಪತ್ರ ಮತ್ತು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು.  ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.